ಸಾಕ್ಷಿಗೆ ಪ್ರಮಾಣ ವಚನವನ್ನು ದಿಃ27-11-2025 ರಂದು ಬೋಧಿಸಲಾಯಿತು.

ಪಾಟೀ ಸವಾಲುಃವಾದಿ ಪರ ಶ್ರೀ ಆರ್ ಎಸ್ ಎಚ್ ವಕೀಲರಿಂದಃ

ವಾದಿ ಈ ದಾವೆಯಲ್ಲಿ ಸಲ್ಲಿಸಿರುವ ದಾವಾಸ್ತಿಯ ಸರ್ವೆ ನಂ 39/2 ರ ಬಗ್ಗೆ ನನಗೆ ಮಾಹಿತಿ ಇರುತ್ತದೆ. ದಾವಾಸ್ತಿಯನ್ನು ವಾದಿ 1 ನೇ ಪ್ರತಿವಾದಿಯಿಂದ ಖರೀದಿ ಮಾಡಿರುತ್ತಾನೆ. ಸದರಿ ಖರೀದಿ ವ್ಯವಹಾರದಲ್ಲಿ ನಾನು ಪಾಲ್ಗೊಂಡಿಲ್ಲ. ಸದರಿ ಖರೀದಿ ವ್ಯವಹಾರ ಕಾಲಕ್ಕೆ ವಾದಿ ಮತ್ತು 1 ನೇ ಪ್ರತಿವಾದಿ ನಡುವೆ ಏನೇನು ಮಾತುಕತೆ ಆಗಿರುತ್ತದೆ ಎಂದು ನನಗೆ ಗೊತ್ತಿಲ್ಲ. ಸಾಕ್ಷಿಯು ಮುಂದುವರೆದು ನಾನು ದಾಖಲೆ ಪ್ರಕಾರ ತಿಳಿದುಕೊಂಡಿರುತ್ತೇನೆ ಎಂದು ನುಡಿಯುತ್ತಾರೆ.

2. ವಾದಿ ದಾವಾಸ್ತಿಯನ್ನು 1 ನೇ ಪ್ರತಿವಾದಿಯಿಂದ ಖರೀದಿ ಮಾಡಿದ್ದು ಸದರಿ ಖರೀದಿ ಪತ್ರವನ್ನು ನಾನು ನೋಡಿ ತಿಳಿದುಕೊಂಡಿರುತ್ತೇನೆ. ನಿ.ಪಿ-10 ಕ್ಕೆ 2, 3, 5 ಮತ್ತು 6 ನೇ ಪ್ರತಿವಾದಿಗಳು ಒಪ್ಪಿಗೆ ಸಾಕ್ಷಿದಾರರಾಗಿ ಸಹಿ ಮಾಡಿರುತ್ತಾರೆ. ಈ ಪ್ರಕರಣದಲ್ಲಿ ತಕರಾರು ಸಲ್ಲಿಸುವಾಗ ಮತ್ತು ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರ ಸಲ್ಲಿಸುವಾಗ ಇತರೆ ಪ್ರತಿವಾದಿಗಳನ್ನು ವಿಚಾರಿಸಿರುತ್ತೇನೆ. ಸಾಕ್ಷಿಯು ಮುಂದುವರೆದು ಈಗ 2 ವರ್ಷಗಳ ಹಿಂದೆ 2 ನೇ ಪ್ರತಿವಾದಿ ಮೃತಪಟ್ಟಿರುತ್ತಾರೆ ಎಂದು ನುಡಿಯುತ್ತಾರೆ.

3. 1, 3, 5 ಮತ್ತು 6 ನೇ ಪ್ರತಿವಾದಿಗಳು ಸಿದ್ದಾಪುರ ತಾಲೂಕಿನಲ್ಲಿ ವಾಸವಿರುತ್ತಾರೆ ಎಂದರೆ ಸರಿ. 3 ನೇ ಪ್ರತಿವಾದಿ ನನ್ನ ಗಂಡ. ನಿ.ಪಿ-10 ರ ಕ್ರಯ ಪತ್ರಕ್ಕೆ 3 ನೇ ಪ್ರತಿವಾದಿ ಸಹ ಒಪ್ಪಿಗೆ ಸಾಕ್ಷಿದಾರರಾಗಿ ಸಹಿ ಮಾಡಿರುತ್ತಾರೆ ಎಂದರೆ ಸರಿ. 3 ನೇ ಪ್ರತಿವಾದಿಯೂ ಸಹ ನನ್ನೊಂದಿಗೆ ನ್ಯಾಯಾಲಯಕ್ಕೆ ಹಾಜರಾಗುತ್ತಿದ್ದಾರೆ ಎಂದರೆ ಸರಿ. ದಾವಾಸ್ತಿಗೆ ಸಂಬಂದಿಸಿದಂತೆ 1 ನೇ ಪ್ರತಿವಾದಿ ವಾದಿಗೆ ಮಾರಾಟ ಮಾಡಿದ ಬಗ್ಗೆ 3 ನೇ ಪ್ರತಿವಾದಿಗೆ ತಿಳಿದಿರುತ್ತದೆ ಎಂದರೆ ಸರಿ.

4. 1 ನೇ ಪ್ರತಿವಾದಿ ದಾವಾಸ್ತಿಯಲ್ಲಿ 8 ಗುಂಟೆ 8 ಆಣೆ ಕ್ಷೇತ್ರ ವನ್ನು ವಾದಿಗೆ ಮಾರಾಟ ಮಾಡಿರುತ್ತಾರೆ. ದಾವಾ ಸರ್ವೆ ನಂ 39 ರ ಜಮೀನು 1997 ರಲ್ಲಿ ಪೊಡಿ ಆಗಿರುತ್ತದೆ. ಸದರಿ ಪೊಡಿ ಪ್ರಕ್ರಿಯೆ ಕಾಲಕ್ಕೆ 1 ನೇ ಪ್ರತಿವಾದಿ ನೋಡಿಕೊಂಡಿರುತ್ತಾರೆ.

5. 1 ನೇ ಪ್ರತಿವಾದಿಗೆ ಈಗ 94 ವರ್ಷ ವಯಸ್ಸಾಗಿದ್ದು, ಕಣ್ಣು ಮತ್ತು ಕಿವಿ ಸೂಕ್ಷ್ಮತೆ ಕಡಿಮೆ ಆಗಿದ್ದು ಮನೆಯಲ್ಲಿಯೇ ಇರುತ್ತಾರೆ. 1 ನೇ ಪ್ರತಿವಾದಿಗೆ ವಯಸ್ಸಾಗಿದ್ದರಿಂದ ಕಣ್ಣಿನ ದೃಷ್ಟಿ ಕಡಿಮೆ ಆಗಿರುತ್ತದೆ.

6. ಕೊಂಡ್ಲಿ ಗ್ರಾಮದ ಸರ್ವೆ ನಂ 39/4 ನನ್ನ ಮತ್ತು 3 ನೇ ಪ್ರತಿವಾದಿಯ ಜಂಟಿ ಖಾತೆಯಲ್ಲಿ ಇರುತ್ತದೆ. ಸದರಿ ಕೊಂಡ್ಲಿ ಗ್ರಾಮದ ಸರ್ವೆ ನಂ 39/4 ನಮಗೆ ವಿಭಾಗಪತ್ರದ ಮೂಲಕ 2010 ರಲ್ಲಿ ಬಂದಿರುತ್ತದೆ. ಸದರಿ ವಿಭಾಗಕ್ಕಿಂತ ಮೊದಲೇ ಅಂದರೆ ದಾವಾ ಸರ್ವೆ ನಂ 39 ರ ಬಗ್ಗೆ ತಿಳಿದುಕೊಂಡಿರುತ್ತೇನೆ.

7. ಕೊಂಡ್ಲಿ ಗ್ರಾಮದ ಸರ್ವೆ ನಂ 39/4 ರ ಪೂರ್ವಕ್ಕೆ ಸರ್ವೆ ನಂ 37, 39/2 ಮತ್ತು 39/3, ಪಶ್ಚಿಮಕ್ಕೆ ಸರ್ವೆ ನಂ 88, ದಕ್ಷಿಣಕ್ಕೆ ಸರ್ವೆ ನಂ 39/2 ಮತ್ತು 40, ಉತ್ತರಕ್ಕೆ ಸರ್ವೆ ನಂ 39/1 ರ ಜಮೀನುಗಳು ಬರುತ್ತದೆ .

8. ಸದರಿ ಕೊಂಡ್ಲಿ ಗ್ರಾಮದ ಸರ್ವೆ ನಂ 39/4 ರ ದಕ್ಷಿಣ ಮತ್ತು ಪೂರ್ವ ಗಡಿಗೆ ಹೊಂದಿಕೊಂಡಂತೆ ದಾವಾಸ್ತಿ ಸರ್ವೆ ನಂ 39/2 ಬರುತ್ತದೆ.

9. ನಿ.ಪಿ10 ರ ಪ್ರಕಾರ ವಾದಿ ದಾವಾ ಸರ್ವೆ ನಂ 39/2 ರಲ್ಲಿ 8 ಗುಂಟೆ 8 ಆಣೆ ಕ್ಷೇತ್ರವನ್ನು ಖರೀದಿ ಮಾಡಿರುತ್ತಾರೆ. ದಾವಾ ಸರ್ವೆ ನಂ 39 ರಲ್ಲಿ 2 ಗುಂಟೆ ಬ ಖರಾಬ್ ಇರುತ್ತದೆ.

10. ದಾವಾ ಸರ್ವೆ ನಂ 39/2 ರಲ್ಲಿ ಪೊಡಿ ಆದ ನಂತರ 8 ಗುಂಟೆ ಕ್ಷೇತ್ರ ಮಾತ್ರ ದಾಖಲಾಗಿರುತ್ತದೆ.

11. ದಾವಾ ಸರ್ವೆ ನಂ 39/4 ರಲ್ಲಿ ಪೊಡಿ ಆದ ನಂತರ 25 ಗುಂಟೆ , 1 ಗುಂಟೆ ಖರಾಬ್, ಒಟ್ಟು 26 ಗುಂಟೆ ನಮ್ಮ ಕುಟುಂಬದಲ್ಲಿ ಆದ ವಿಭಾಗದ ಪ್ರಕಾರ ನಮಗೆ ಬಂದಿರುತ್ತದೆ.

12. ನಿ.ಪಿ-10 ರಲ್ಲಿ ದಾವಾಸ್ತಿಗೆ ಸಂಬಂದಿಸಿದಂತೆ ತೋರಿಸಿದ ಚೆಕ್ಕುಬಂದಿ ತಪ್ಪಾ ಗಿರುತ್ತದೆ. ನಿ.ಪಿ-10 ರಲ್ಲಿ ದಾವಾಸ್ತಿಗೆ ಸಂಬಂದಿಸಿದಂತೆ ತೋರಿಸಿದ ಚೆಕ್ಕುಬಂದಿ ತಪ್ಪಾಗಿರುವ ಬಗ್ಗೆ ದಿಃ 25-09-2018 ರಲ್ಲಿ ಹದ್ದಬಸ್ತ ಸರ್ವೆ ಮಾಡಿಸಿರುತ್ತೇನೆ.

13. ನಿ.ಪಿ-10 ರಲ್ಲಿ ತೋರಿಸಿರುವ ದಾವಾಸ್ತಿಯ ಪಶ್ಚಿಮ ದಿಕ್ಕಿನಲ್ಲಿ ತಪ್ಪಾಗಿರುತ್ತದೆ. ನಿ.ಪಿ-10 ರಲ್ಲಿ ತೋರಿಸಿರುವ ದಾವಾಸ್ತಿಯ ಪಶ್ಚಿಮ ದಿಕ್ಕನ್ನು ಹೊರತುಪಡಿಸಿ ಎಲ್ಲಾ ದಿಕ್ಕಿನಲ್ಲಿ ಚತುರ್ಗಡಿ ಸರಿ ಇರುತ್ತದೆ. ನಿ.ಪಿ-10 ರಲ್ಲಿ ತೋರಿಸಿರುವ ದಾವಾಸ್ತಿಯ ಪಶ್ಚಿಮ ದಿಕ್ಕಿನಲ್ಲಿ ಹೊರನೀರು ಹರಿಯುವ ದೊಡ್ಡ ಕಾಲುವೆ ನಮೂದಾಗಿದೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ತಪ್ಪಾಗಿ ನಮೂದಾಗಿದೆ ಎಂದು ನುಡಿಯುತ್ತಾರೆ. ನನ್ನ ಪ್ರಕಾರ ಸದರಿ ನಿ.ಪಿ-10 ರಲ್ಲಿ ತೋರಿಸಿರುವ ದಾವಾಸ್ತಿಯ ಪಶ್ಚಿಮ ಕ್ಕೆ ದಾವಾ ಸರ್ವೆ ನಂ 39/1 ರ ಗಡಿ ಬರಬೇಕಾಗಿತ್ತು. ದಾವಾ ಸರ್ವೆ ನಂ



39/1 ರ ಪಶ್ಚಿಮಕ್ಕೆ ಗಟಾರ, ಮತ್ತು ಸರ್ವೆ ನಂ 88 ಬರುತ್ತದೆ. ಸದರಿ ಗಟಾರ ಈಗ ರಾಜಕಾಲುವೆ ಆಗಿರುತ್ತದೆ ಎಂದರೆ ಸರಿ.

14. ವಾದಿ ದಾವಾಸ್ತಿಯ ಪಶ್ಚಿಮ ದಿಕ್ಕಿನ ಕಡೆಯಿಂದ ದೊಡ್ಡ ಕಾಲುವೆಯ ನಡುವೆ ಎಷ್ಟು ಅಡಿ ಉದ್ದ ಮತ್ತು ಅಗಲ ಇರುತ್ತದೆ ಎಂದರೆ ಸಾಕ್ಷಿಯು 1 ಗುಂಟೆ 7 ಆಣೆ ಕ್ಷೇತ್ರ ಇರುತ್ತದೆ ಎಂದು ನುಡಿಯುತ್ತಾರೆ. ವಾದಿ

ದಾವಾಸ್ತಿಯ ಪಶ್ಚಿಮ ದಿಕ್ಕಿನ ಕಡೆಯಿಂದ ದೊಡ್ಡ ಕಾಲುವೆ ಎಷ್ಟು ಅಡಿ ಅಗಲ ಇರುತ್ತದೆ ಎಂದು ನನಗೆ ನಿಖರವಾಗಿ ಹೇಳಲು ಆಗುವುದಿಲ್ಲ. ಸದರಿ ರಾಜ ಕಾಲುವೆ ಗಡಿಗಳನ್ನು ನಾವು ಗುರುತಿಸಿರುತ್ತೇವೆ.

15. ದಾವಾ ಸರ್ವೆ ನಂ 39 ರಲ್ಲಿ ರುವ 2 ಗುಂಟೆ ಬ ಖರಾಬ್ ಯಾವ ಉದ್ದೇಶಕ್ಕಾಗಿ ಬಿಟ್ಟಿರುತ್ತಾರೆ ಎಂದು ನಾನು ದಾಖಲೆಯನ್ನು ತೆಗೆಸಿ ನೋಡಿರುವುದಿಲ್ಲ.

ಈ ಹಂತದಲ್ಲಿ ವಾದಿ ಪರ ವಕೀಲರು ಮುಂದುವರೆದ ಪಾಟೀಸವಾಲಿಗೆ ಸಮಯವನ್ನು ಕೋರಿದ್ದರಿಂದ ಕಾಲಾವಕಾಶ ನೀಡಿ ಮುಂದೂಡಲಾಯಿತು.

(ನನ್ನ ಹೇಳಿಕೆ ಪ್ರಕಾರ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

**ಓ.ಹೇ.ಕೇ. ಸರಿ ಇದೆ,**

**ಸಹಿ ಇದೆ**

**ಸಿವಿಲ್ ನ್ಯಾಯಾಧೀಶರು ಸಿದ್ದಾಪುರ**